ಶ್ರೀ ಆರ್.ವಿ. ದೇಶಪಾಂಡೆ : ಅದು ಚರ್ಚೆಯಾಗಿದೆ. ಸ್ಪೆಸಿಫಿಕ್ಕಾಗಿ ಹೇಳಿದ್ದೇವೆ. ಅರಾಕ್ ಆಕ್ಷನ್ ಪ್ರತಿವರ್ಷ ಮಾಡುತ್ತೀರಲ್ಲ ಅದು ಐದು ವರ್ಷಕ್ಕೊಮ್ಮೆ ಮಾಡಿ ಕೆಲವರಿಗೆ ಸಹಾಯ ಮಾಡುವುದಕ್ಕೆ ಮಾಡುತ್ತಾ ಇದ್ದೀರಿ.

ಶ್ರೀ ಧರ್ಮಸಿಂಗ್ : ಮಾಡಿಲ್ಲ ಎಂದು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರ, ದೇಶಪಾಂಡೆ ಅವರು ಮಂತ್ರಿಯಾಗಿ ಕೂಡ ಕೆಲಸ ಮಾಡಿದ್ದಾರೆ. ಇವತ್ತು ಏನಾದರೂ ಪುರಾವೆ ಇದ್ದರೆ ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೆ ಸದನದಲ್ಲಿ ಅದನ್ನು ಹೇಗೆ ನಿರಾಕರಣೆ ಮಾಡುವುದಕ್ಕೆ ಸಾಧ್ಯ? ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೆ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಹೇಳಬಹುದು. ಎಷ್ಟೋ ಪರಿಶೀಲನೆ ಮಾಡುವಂಥ ರೀತಿಯಲ್ಲಿ ಸರ್ಕಾರ ಏನೇನು ನಿರ್ಣಯ ತೆಗೆದುಕೊಳ್ಳಬೇಕಾಗಿದೆ ಯಾವ ರೀತಿಯಾಗಿ ವಿಚಾರ ಮಾಡಬೇಕಾಗಿದೆ ಎಂಬ ಬಗ್ಗೆ ಸದನದಲ್ಲಿ ಕೂಡ ಸಾಕಷ್ಟು ವಿಚಾರಗಳು ಪ್ರಸ್ತಾಪವಾಗಿದೆ. ಯಾವ ಯಾವ ವಿಚಾರಗಳು ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ಸರ್ಕಾರ ಗಮನಹರಿಸುತ್ತದೆಂದು ಹೇಳಿದ್ದೇನೆಯೇ ಹೊರತು ಡಿಸಿಷನ್ ತೆಗೆದುಕೊಂಡಿಲ್ಲ. ತಮ್ಮ ಮನಸ್ಸಿನಲ್ಲಿ ಬಂದಿರುವ ಶಂಕೆ ಸತ್ಯಕ್ಕೆ ದೂರವಾದುದು. ಇವತ್ತಿನ ದಿವಸ ಅದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿಲ್ಲ. ಆದ್ದರಿಂದ ಈ ನಿಲುವಳಿ ಸೂಚನೆ ಮೂಲಕ ಸರ್ಕಾರದ ಮೇಲೆ ಆರೋಪ ಮಾಡುವುದಕ್ಕೆ ಆಗುವುದಿಲ್ಲ ಎಂಬ ಮಾತು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಶಾಸನಸಭೆ ಆದಮೇಲೆ ತೆಗೆದುಕೊಳ್ಳುತ್ತೀರಿ ಎಂದು ಹೇಳುತ್ತಾರೆ. ತೆಗೆದುಕೊಳ್ಳುವುದಿಲ್ಲ ಎಂದರೆ ಸಂತೋಷ. ಇಂಥ ನಿರ್ಣಯ ಆದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಲುಕ್ಸಾನಾಗುತ್ತದೆ. ಅದರ ಜವಾಬ್ದಾರಿ ನಿಮ್ಮ ಮೇಲೆ ಬರುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅರ್ಜಿಗಳನ್ನು ಒಪ್ಪಿಸುವುದಕ್ಕಿಂತ ಮೊದಲು ಇವತ್ತಿನ ಅಜೆಂಡಾ ಪೇಪರ್‌ನಲ್ಲಿ ಒಂದು ಸರ್ಕ್ಯುಲರ್‌ನ್ನು ಸನ್ಮಾನ್ಯ ಅಜೀಜ್ ಸೇಠ್ ಅವರು ಕಳುಹಿಸಿಕೊಟ್ಟಿದ್ದಾರೆ.

ಅಧ್ಯಕ್ಷರು : ಅಜೆಂಡಾ ಪೇಪರ್‌ನಲ್ಲಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಜೆಂಡಾ ಪೇಪರ್‌ನಲ್ಲಿ ಬಂತು. ಆದ್ದರಿಂದ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಇವತ್ತು ಏನೇ ಬಂದಿದ್ದರೂ ಸ್ವಲ್ಪ ವಿವರವಾಗಿ ಮೂಲಕ್ಕೆ ಹೋಗಿ ನೋಡಿ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾವ

ವಿಷಯ : ಕೆಎಸ್‌ಆರ್‌ಟಿಸಿ ಬಸ್ ದರಗಳನ್ನು ಜಾಸ್ತಿ ಮಾಡುವ ಬಗ್ಗೆ ಸಾರಿಗೆ ಸಚಿವರು ಸುತ್ತೋಲೆಯನ್ನು ಕಳುಹಿಸಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ : (ಕನಕಪುರ) ಇದು ಬಹಳ ಮಹತ್ವವಾಗಿರತಕ್ಕ ವಿಚಾರ. ಇದನ್ನು ನಾವು ಖಂಡನೆ ಮಾಡಬೇಕಾಗುತ್ತದೆ. ಸುಮ್ಮನೆ ಸದನ ನಡೆಯುವ ಸಂದರ್ಭದಲ್ಲಿ ಸರ್ಕಾರದವರು ಕಳುಹಿಸಿದ್ದಾರೆ ಎಂದು ಇದನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಇವರು ಏನು ಕಳುಹಿಸಿದ್ದಾರೆಂದರೆ

"All the Members of the Legislative Assembly and the Legislative Council regarding revision of bus fares of KSRTC."

ಎಂದು ಹೇಳಿದ್ದಾರೆ.

ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಿದೆ, ಕೆಎಸ್‌ಆರ್‌ಟಿಸಿ ದರಗಳನ್ನು ನಾವು ಜಾಸ್ತಿ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇವರಿಗೆ ಇದನ್ನು ಅಜೆಂಡಾಗಳಲ್ಲಿ ಕಳುಹಿಸುವುದಕ್ಕೆ ಯಾರು ಅಧಿಕಾರ ಕೊಟ್ಟಿದ್ದಾರೆ? ಯಾವ ಕಾರಣಕ್ಕೆ ಏರಿಸುತ್ತಾರೆ? ಅಧಿವೇಶನ ನಡೆಯುವ ಸಂದರ್ಭದಲ್ಲಿ ನಾವು ಹಲವಾರು ಸಾರಿ ಹೇಳಿದ್ದೇನೆ ಈ ಮಂತ್ರಿಗಳು ಹಾಗೂ ಸರ್ಕಾರಕ್ಕೆ ಬಸ್ ಫೇರ್ ಡಿವಿಜನ್ ಮಾಡುವುದು ಬೇಡ ಎಂದು ಹೇಳಿದ್ದೇವೆ. ನಮ್ಮ ಸರ್ಕಾರ 1985ರಿಂದ 90ರವರೆಗೆ ಇದ್ದ ಕಾಲದಲ್ಲಿ 6 ವರ್ಷದಲ್ಲಿ ಏನು ಮಾಡಿದ್ದೇನೆ ಎನ್ನುವ ಬಗ್ಗೆ ಇವರೇ ಅಂಕಿಅಂಶವನ್ನು ಕೊಟ್ಟಿದ್ದಾರೆ. ಬಿಟಿಎಸ್ ಬಿಟ್ಟು ಕೆಎಸ್‌ಆರ್‌ಟಿಸಿ ಲಾಭ ಮಾಡಿದೆ. 1986–87ರಲ್ಲಿ ಕೇವಲ 4

ಕೋಟಿ ಲುಬ್ಸಾನು ಆಗಿದೆ. ಅವರೇ ಆ ಬಗ್ಗೆ ಅರಿಕೆ ಅರಿಕೆ ಕೊಟ್ಟಿದ್ದಾರೆ. ಇವರ ಸರ್ಕಾರ ಬಂದು ಎರಡು ವರ್ಷಗಳು ಆಗಿಲ್ಲ. 1990ರಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ 29 ಪರ್ಸೆಂಟ್ ಬೆಲೆಗಳನ್ನು ಜಾಸ್ತಿ ಮಾಡಿದರು. ಮತ್ತೆ ಬೆಲೆ ಜಾಸ್ತಿ ಮಾಡುವುದಕ್ಕೆ ಹೊರಟಿದ್ದೀರಿ ಎನ್ನುವ ತೀರ್ಮಾನವನ್ನು ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ, ಈ ಅಧಿವೇಶನಕ್ಕೆ ನಮಗೆಲ್ಲರಿಗೂ ಅವಮಾನ ಮಾಡಿ ಇವತ್ತು ಈ ಸರ್ಕಾರ ಈ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದೆ. ಇದರ ಬಗ್ಗೆ ಸರ್ಕಾರದ ಧೋರಣೆ ಏನು ಎಂಬುದನ್ನು ಹೇಳಬೇಕು. ಬೆಲೆ ಹೆಚ್ಚು ಮಾಡಬೇಕಾದರೆ ಮಂತ್ರಿಮಂಡಲ ಒಪ್ಪಿಗೆ ಕೊಡಬೇಕಾಗುತ್ತದೆ. ಕೆಎಸ್ಆರ್‌ಟಿಸಿ ಬಸ್ ದರವನ್ನು ಮಾಡಬೇಕಾದರೆ ಕೇವಲ ಕೆಎಸ್ಆರ್‌ಟಿಸಿ ಅಷ್ಟೇ ಅಲ್ಲ ಇವತ್ತು ಖಾಸಗೀ ಬಸ್‌ನವರಿಗೂ ಕೂಡಾ ಪರವಾನಗಿ ಕೊಟ್ಟಿದ್ದೇವೆ. ಮೊಟರ್‌ವೆಹಿಕಲ್ಸ್ ಆಕ್ಟ್ ಪ್ರಕಾರ ಯಾವುದೇ ಡಿವಿಜನ್ ಆಫ್ ಬಸ್ ಫೇರ್ ಆಗಬೇಕಾದರೂ ಅದನ್ನು ಗೆಜೆಟ್ ಮಾಡಬೇಕಾಗುತ್ತದೆ. ಆ ನಂತರ ಸಾರ್ವಜನಿಕರಿಂದ ಆಬ್ಜೆಕ್ಷನ್ಸ್ ಬರಬೇಕು. ಬಸ್‌ಗಳ ಮಾಲೀಕರಿಂದ ಆಬ್ಜೆಕ್ಷನ್ಸ್ ತರಿಸಬೇಕು. ಕೆಎಸ್ಆರ್‌ಟಿಸಿ ಸಂಸ್ಥೆನೂ ಒಬ್ಬ ಬಸ್ ಮಾಲೀಕನ ರೂಪದಲ್ಲಿರುವುದರಿಂದ ಅವರೂ ಬಂದು ಆಬ್ಜೆಕ್ಷನ್ ಹಾಕಬೇಕಾಗುತ್ತದೆ. ಇವರೆಲ್ಲರ ಮಾತನ್ನೂ ಕೇಳಬೇಕಾಗುತ್ತದೆ. ಕೇವಲ ಶಾಸಕರ ಅಭಿಪ್ರಾಯವಷ್ಟೇ ಇದಕ್ಕೆ ಬೇಕಾಗಿಲ್ಲ. ಇವತ್ತು ಯಾವ ಆಧಾರದ ಮೇಲೆ ಸರ್ಕಾರ ಈ ತೀರ್ಮಾನವನ್ನು ಮಾಡಿದೆ? ಡಿವಿಜನ್ ಮಾಡುವುದಕ್ಕೆ ಪಬ್ಲಿಕ್ ಆಬ್ಜೆಕ್ಷನ್ ಕಾಲ್‌ಫರ್ ಮಾಡಿದ್ದಾರಾ? ಅದನ್ನು ಮಾಡಿ ಯಾವತ್ತು ಗೆಜೆಟ್‌ಗೆ ಹಾಕಿದ್ದಾರೆ? ಇವತ್ತು ಅಧಿವೇಶನ ನಡೆಯುವಾಗ ಕೊನೇ ದಿನ ಅಚೀಡಾ ಮೂಲಕ ಇದನ್ನು ಕಳುಹಿಸಿ ಅಸೆಂಬ್ಲಿ ಅಪ್ರೂವಲ್ ತೆಗೆದುಕೊಂಡಿದ್ದೇನೆ. ಎಂದು ಹೊರಗಡೆ ಹೋಗಿ ಭಾಷಣ ಮಾಡುವುದಕ್ಕೆ ಇದನ್ನು ತಂದಿದ್ದೀರಾ? ಸರ್ಕಾರ ಅದನ್ನು ಮಾಡಬೇಕೆಂದು ಹೊರಟಿದ್ದರೆ ಅದಕ್ಕೆ ಪ್ರಭಲವಾದ ವಿರೋಧ ಮಾಡಬೇಕಾಗುತ್ತದೆ. ಇವತ್ತು ಕರ್ನಾಟಕ ರಾಜ್ಯದ 60 ಲಕ್ಷ ಜನ ಪ್ರತಿದಿವಸ ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಹಾಗೂ ಇತರ ಖಾಸಗೀ ಬಸ್‌ನಲ್ಲಿ 10 ಲಕ್ಷ ಜನ ಪ್ರಯಾಣ ಮಾಡುತ್ತಾರೆ. ಹೀಗೆ 70 ಲಕ್ಷ ಜನರಿಗೆ ಸಂಬಂಧಪಟ್ಟ ವಿಚಾರ. ಎಫೆಕ್ಟೀವ್ ಗೌರ್ನಮೆಂಟ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಇವತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪೆಟ್ರೋಲ್ ಹಾಗೂ ಡೀಸಲ್ ಮೇಲೆ ಡಾಲರ್ ಬೆಲೆ ಕಡಿಮೆಯಾಗಿದೆ. ಅದಕ್ಕೇ ಕೇಂದ್ರ ಸರ್ಕಾರ ಸಹಾ ವಿಚಾರ ಮಾಡುತ್ತಿದೆ. ಈ ಸಾರಿ ಕೇಂದ್ರದಲ್ಲಿ, ಪೆಟ್ರೋಲ್ ಹಾಗೂ ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಡೀಸಲ್ ಬೆಲೆ ಜಾಸ್ತಿ ಮಾಡುವುದಕ್ಕೆ ಹೋಗಲಿಲ್ಲ. ಇಂತಹ ಸಂದರ್ಭದಲ್ಲಿ ಯಾವ ಕಾರಣದಿಂದ ರಾಜ್ಯ ಸರ್ಕಾರ ಬೆಲೆ ಜಾಸ್ತಿ ಮಾಡುವುದಕ್ಕೆ ಹೊರಟಿದೆ ಎಂಬುದನ್ನು ಈ ಸದನ ತಿಳಿಯಬೇಕು. ರಾಜ್ಯದ ಜನರಿಗೆ ದೊಡ್ಡ ಭಾರವನ್ನು ಅನ್ಯಾಯವನ್ನು ಮಾಡುವುದಕ್ಕೆ ಹೊರಟಿದ್ದೀರಿ. ಬೆಲೆ ಏರಿಕೆ ಬಗ್ಗೆ ಈ ಸದನದ ಎರಡೂ ಕಡೆಯ ಯಾವುದೇ ಸದಸ್ಯರು ಒಪ್ಪುವುದಿಲ್ಲ. ಇವತ್ತು ಸಕ್ಕರೆ ಬೆಲೆ, ಎಣ್ಣೆ ಬೆಲೆ ಜಾಸ್ತಿಯಾಗಿದೆ. ಇವತ್ತು 3 ಸಾವಿರ ರೂಪಾಯಿ ಆದಾಯ ಬರತಕ್ಕವನು ಜೀವನ ಮಾಡುವುದು ಕಷ್ಟವಾಗಿರುವಾಗ ಬಸ್ ಬೆಲೆಯನ್ನು ಇನ್ನೂ ನಾಲ್ಕಾಣೆ ಜಾಸ್ತಿ ಮಾಡುತ್ತೇವೆಂದರೆ ಯಾವ ನ್ಯಾಯ ಸ್ವಾಮಿ? ಇವತ್ತು ಕೊನೇ ದಿವಸ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಹಿಂಬಾಗಿಲಿನಿಂದ ಈ ಸದನದ ಒಪ್ಪಿಗೆಯನ್ನು ಪಡೆದಿದ್ದೇವೆ ಎಂದು ಹೇಳುವುದಕ್ಕೆ, ಪ್ರಕಟ ಮಾಡುವುದಕ್ಕೆ ವಿರೋಧ ಪಕ್ಷದವರು ಇದನ್ನು ಒಪ್ಪಿಕೊಂಡಿದ್ದಾರೆಂದು ಹೇಳುವುದಕ್ಕೆ ಇದನ್ನು ತಂದಿದ್ದಾರೆ. ಮಾನ್ಯ ಮಂತ್ರಿಗಳು ಇದಕ್ಕೆ ಕ್ಷಮಾಪಣೆ ಕೇಳಬೇಕು. ಮತ್ತು ಈಗ ಏನು ರೇಟ್ ಜಾಸ್ತಿ ಮಾಡಬೇಕೆಂದಿದ್ದೀರಿ ಅದನ್ನು ತಕ್ಷಣ ನಿಲ್ಲಿಸಬೇಕು. ಇವತ್ತು ಖಾಸಗೀಕರಣ ಮಾಡಬೇಕೆಂದು ಸರ್ಕಾರದವರು ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು ಚರ್ಚೆ ಮಾಡೋಣ. ಸಂಪೂರ್ಣ ಖಾಸಗೀಕರಣ ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ಖಾಸಗೀಕರಣ ಮಾಡಬೇಕಾದರೆ ಯಾವ ರೀತಿ ಮಾಡಬೇಕು? ಅದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಎಲ್ಲೆಲ್ಲಿ ಹೆಚ್ಚು ಆದಾಯ ಬರತಕ್ಕ ರೂಟ್ಸ್ ಇವೆ ಅವನ್ನು ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಹೊರಟಿದ್ದೀರಾ? ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಇಡೀ

ಕೆಎಸ್ಆರ್‌ಟಿಸಿ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಸುಮಾರು 450 ಕೋಟಿ ರೂಪಾಯಿ ಪ್ರತಿ ವರ್ಷ ಟರ್ನ್‌ಓವರ್ ಇರತಕ್ಕ ಒಂದು ಸಂಸ್ಥೆ ಇದು. ಈ ಸಂಸ್ಥೆಗೆ ಸುಮಾರು 60ರಿಂದ 80 ಕೋಟಿ ರೂಪಾಯಿ ಆದಾಯವನ್ನು ಹೆಚ್ಚು ಮಾಡಬೇಕೆಂದು ಇದ್ದರೆ, ಯಾವ ಕಾರಣದಿಂದ ಹೆಚ್ಚು ಮಾಡುವದಕ್ಕೆ ಹೊರಟಿದ್ದೀರಿ ಎನ್ನುವುದು ನಮಗೆ ಗೊತ್ತಾಗಬೇಕಾತ್ತದೆ. ಇದನ್ನು ನಮಗೆ ಕಳುಹಿಸಿರುವುದಕ್ಕೆ ಸರ್ಕಾರದವರು ಒಂದು ಕ್ಷಮಾಪರ್ಣೆಯನ್ನು ಕೇಳಬೇಕು. ಅಕಸ್ಮಾತ್ ನೀವು ಬೆಲೆಯನ್ನು ಹೆಚ್ಚು ಮಾಡಬೇಕೆಂದು ಇದ್ದರೂ ಇಡೀ ರಾಜ್ಯದಾದ್ಯಂತ ಜನಗಳ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ. ಬೆಲೆ ಏರಿಸುವುದನ್ನು ಕೈಬಿಡಬೇಕು. ಮಾಡಿದರೆ ಇಡೀ ರಾಜ್ಯದ ಜನಗಳಿಂದ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಒಂದು ನಿಮಿಷ ಈಲ್ಡ್ ಆಗಿ. ಈ ಪ್ರತಿಯನ್ನು ಎಲ್ಲ ಶಾಸಕರಿಗೆ ಕಳುಹಿಸಿದ್ದಾರೆ. ಬೆಲೆಯನ್ನು ಏರಿಸುವುದಕ್ಕೆ ಮೊದಲು ವಿರೋಧ ಪಕ್ಷದ ಶಾಸಕರುಗಳನ್ನು ಕರೆದು ಮಾತುಕತೆ ಆಡುತ್ತೇವೆಂದು ಈ ಸದನದಲ್ಲಿ ಮಾನ್ಯ ಸಾರಿಗ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ಒಂದು ಸಾರಿ, ಎರಡನೆಯ ಸಾರಿ ಮುಂದಕ್ಕೆ ಹಾಕಿ. ಅದನ್ನು ಮೂರನೆಯ ಸಾರಿಯೂ ಮುಂದಕ್ಕೆ ಹಾಕಿದರು. ನಮ್ಮನ್ನು ಕರೆದಿದ್ದರೆ ನಾವು ನಮ್ಮ ಸಲಹೆಗಳನ್ನು ಕೊಡುತ್ತಿದ್ದೆವು. ಈವೊಂದು ಅನೀತಿಯನ್ನು ಕೈಬಿಡಿ, ಇದು ಸರಿಯಲ್ಲ, ಈಗಾಗಲೇ ಜನ ಎಲ್ಲ ಪದಾರ್ಥಗಳ ಬೆಲೆ ಏರಿಕೆಯಿಂದ ಹೊರೆಯನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಂತ ಪರಿಸ್ಥಿತಿ ಇರುವಾಗ ನೀವು ದರವನ್ನು ಏರಿಸಬೇಡಿ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಇವತ್ತು ಇದು ನಮ್ಮ ಕೈಯಲ್ಲೂ ಇದೆ. ಎಲ್ಲ ಶಾಸಕರ ಕೈಗೂ ಬಂದಿದೆ. ನಾಳೆ ಸಭೆ ಮುಂದಕ್ಕೆ ಹೋಗುತ್ತಿದೆ, ಈ ರೀತಿ ತೆರೆಮರೆಯಲ್ಲಿ ಇದ್ದಕ್ಕಿದ್ದ ಹಾಗೆ ದರವನ್ನು ಏರಿಸುತ್ತೇವೆ ಎನ್ನತಕ್ಕ ಹಠಮಾರಿತನ ಮತ್ತು ತಮ್ಮದೇ ಆದ ಒಂದು ಪ್ರತಿಷ್ಠೆಯನ್ನು ಮಾಡಿಕೊಂಡು ಸರ್ಕಾರ ಹೊರಟಿದೆ. ಈ ಸದನದಲ್ಲಿ ಸಾರಿಗೆ ಸಚಿವರು ಮಾತನಾಡುವಾಗ ನಾನು ದರವನ್ನು ಏರಿಸೇ ಏರಿಸುತ್ತೇನೆ ಎನ್ನುವ ಧೋರಣೆಯಲ್ಲಿ ಮಾತನಾಡುತ್ತಾ ಅವರು ಎದ್ದು ಹೊರಗಡೆ ಹೋದರು. ನಾವು ಆಗ ಅವರನ್ನು ಕರೆತುಕೊಳ್ಳಿಯೆಂದು ಹೇಳಿದ್ದವು. 80 ಲಕ್ಷ ಜನ ಇವತ್ತು ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಓಡಾಡುತ್ತಿದ್ದಾರೆ. ಬಸ್ಸಿನ ವ್ಯವಸ್ಥೆ ಸರಿಯಿಲ್ಲ. ಅದರ ಅವ್ಯವಸ್ಥೆಯಿಂದ ಜನಗಳ ಮೇಲೆ ಈ ರೀತಿ ದರ ಏರಿಸುವುದು ಸರಿಯಲ್ಲ. ನಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಮಾನ್ಯ ಸಿದ್ಧಾರವರು ಏನು ಪ್ರಸ್ತಾಪ ಮಾಡಿದ್ದಾರೆ, ನಾನು ಅದನ್ನೇ ಹೇಳುತ್ತಿದ್ದೇನೆ ರಸ್ತೆ ರಸ್ತೆಯಲ್ಲಿ ಸಾರಿಗೆ ಸಂಸ್ಥೆಯ ಬಸ್ಸುಗಳು ಓಡಾಡುವುದಕ್ಕೆ ಬಿಡುವುದಿಲ್ಲ. ಸರ್ಕಾರದ ವಿರುದ್ಧ ತೀವ್ರವಾದಂತಹ ಹೋರಾಟವನ್ನು ಮಾಡುತ್ತೇವೆ ಎನ್ನತಕ್ಕ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಸದನ ನಡೆಯತಕ್ಕ ಸಂದರ್ಭದಲ್ಲಿ, ನಿನ್ನೆಯೇ ಸದನ ಮುಗಿಯುತ್ತಿತ್ತು. ಏನೋ ಅಕಸ್ಮಾತ್ ಸಭೆಯ ಕಾರ್ಯಕಲಾಪಗಳ ಸಮಿತಿ ಸಭೆ ಸೇರಿ ಒಂದು ದಿವಸ ಎಕ್ಸ್‌ಟೆಂಡ್ ಮಾಡಿದ್ದಾರೆ. ಇದು ನಮಗೆ ಗೊತ್ತಿಲ್ಲ. ಸದನ ಮುಗಿದಿದೆ ಎಂದು ಅಂದುಕೊಂಡಿದ್ದೇವೆ. ಆಕಸ್ಮಿಕವಾಗಿ ನಮಗೆ ಈ ಅಜೆಂಡಾ ಬಂದಿದೆ. ಇಡೀ ತಿಂಗಳು ಸದನ ನಡೆಯುತ್ತಿರುವಾಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ ಈಗ.

ಅಧ್ಯಕ್ಷರು : ಇದು ಅಜೆಂಡಾದಲ್ಲಿ ಬಂದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಅಜೆಂಡಾದಲ್ಲಿ ಬಂದಿರುವುದು

ಶ್ರೀ ಬಸವರಾಜರಾಯರೆಡ್ಡಿ : ಅಜೆಂಡಾದಲ್ಲಿ ಬಂದಿಲ್ಲ, ಅಜೆಂಡಾ ಕಳುಹಿಸುವ ಕವರ್‌ನಲ್ಲಿ ಹಾಕಿ ಕಳುಹಿಸಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ತಿಂಗಳು ಸದನ ನಡದರೂ ಕೂಡ ಸಾರಿಗೆ ಸಚಿವರು ಇದರ ಬಗ್ಗೆ ಗಮನಕೊಡಲಿಲ್ಲ. ಈ ಒಂದು ತಿಂಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಈಗಾಗಲೇ ಬಜೆಟ್‌ನಲ್ಲಿ ಸಾಕಷ್ಟು ಎಂಟರಿ ಟ್ಯಾಕ್ಸ್, ಇತರೆ ಬೇರೆ ಬೇರೆ ಟ್ಯಾಕ್ಸ್‌ಗಳನ್ನು ಹಾಕಿ ಇಡೀ ರಾಜ್ಯದಲ್ಲಿ ಬೆಲೆಗಳು ಜಾಸ್ತಿಯಾಗಿದೆ. ಇಂತಹ ಸಂದರ್ಭದಲ್ಲಿ ಇವತ್ತು

ಇದ್ದಕ್ಕಿದ್ದಹಾಗೆ ಆಘಾತ, ಇದು ಶಾಸಕರಿಗೆ ಅಲ್ಲ, ರಾಜ್ಯದ ಜನತೆಗೆ ಉಂಟಾಗಿದೆ ಸರ್ಕಾರಕ್ಕೆ ನಾನು ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಜನ ಏನು ಮಾಡಿದರೂ ಸುಧಾರಿಸಿಕೊಳ್ಳುತ್ತಾರೆನ್ನುವ ಭ್ರಮೆಯಲ್ಲಿ ಇರಬೇಡಿ. ಸದನ ನಡೆಯುತ್ತಿರುವ ಈ ಸದನದಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೆ ಇದ್ದಕ್ಕಿದ್ದ ಹಾಗೆ ಗದಾ ಪ್ರಹಾರ ಮಾಡುತ್ತಾ ಇದ್ದೀರಿ. ಇದನ್ನು ಇಡೀ ರಾಜ್ಯದ ಜನ ವಿರೋಧ ಮಾಡಬೇಕಾಗುತ್ತದೆ. ರಸ್ತೆಯಲ್ಲಿ ಯಾರೂ ಮಂತ್ರಿಗಳು ಓಡಾಡುವುದಕ್ಕೆ ಬಿಡುವುದಿಲ್ಲ. ಈ ಕೆಲಸ ಮಾಡಿರುವುದಕ್ಕೆ ಕ್ಷಮೆ ಕೇಳಬೇಕಾಗುತ್ತದೆ. ತಕ್ಷಣ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಅಚೆಂಡಾ ತಮ್ಮ ಕಟೇರಿಯಿಂದ ಬರುತ್ತದೆ.

ಅಧ್ಯಕ್ಷರು : ಅಚೆಂಡಾವನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಅಚೆಂಡಾದಲ್ಲಿ ಇದು ಪ್ರಸ್ತಾಪವಾಗಿಲ್ಲ. ಆದರೆ ಅಚೆಂಡಾ ರಿಪೋರ್ಟ್ ಜೊತೆಯಲ್ಲಿ ತಮ್ಮ ಕಟೇರಿಯ ಗಮನಕ್ಕೆ ತಾರದೆ ಸಾರಿಗೆ ಸಚಿವರು ಇದನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ಕ್ಲಾರಿಫಿಕೇಶನ್ ಕೊಡಬೇಕು. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ನಾನು ಸ್ಪಷ್ಟೀಕರಣ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ತಿಳಿದುಕೊಳ್ಳುತ್ತೇನೆಂದರೆ,

ಅಧ್ಯಕ್ಷರು : ನೀವೇನೂ ತಿಳಿದುಕೊಳ್ಳಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಏನು ಸಾರಿಗೆ ಸಚಿವರು ತಂದಿದ್ದಾರೆ ಅದರ ಬಗ್ಗೆ ವಿರೋಧ ಪಕ್ಷಗಳ ನಾಯಕರುಗಳನ್ನು ಕರೆದು ಚರ್ಚೆ ಮಾಡುತ್ತೇನೆಂದು ಹೇಳಿದ್ದರು. ಈಗ ಹಿಂದಿನ ಬಾಗಿಲಿನಿಂದ ತಂದಿದ್ದಾರೆ. ಇದರಿಂದ ಪ್ರೈವೇಟ್ ಆಪರೇಟ್ ಮಾಡುವವರು ದರವನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಹೀಗಾಗಿ ಇದನ್ನು ಖಂಡನೆ ಮಾಡುತ್ತೇನೆ. ಸಾರಿಗೆ ಸಚಿವರನ್ನು ಕರೆಸಿ ಅವರ ಕಡೆಯಿಂದ ಸ್ಪಷ್ಟೀಕರಣ ಕೊಡಿಸಿ. ತಕ್ಷಣ ಇದನ್ನು ವಿತ್‌ಡ್ರಾ ಮಾಡಲಿಕ್ಕೆ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಇವತ್ತಿನ ದಿವಸ ನಾನು ಬೆಲೆ ಏರಿಕೆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಪಾಡು ಏನಾಗಿದೆ. ಎಂದರೆ, ನಾವು ಬಸ್ಸುಗಳಲ್ಲಿ ಪ್ರಯಾಣ ಮಾಡತಕ್ಕದ್ದು ಬರೇ ಬಾಲ್ಕನಿ ಸೀಟಲ್ಲೇನೆ. ಒಳಗಡೆ ಇರುವ ಕೂಡ ನುಗ್ಗುವುದಕ್ಕೆ ಆಗುವುದಿಲ್ಲ. ಅಷ್ಟು ಬಸ್ಸುಗಳು ತುಂಬಿರುತ್ತವೆ. ಮೊನ್ನೆ ದಿವಸ ಕೋಲಾರದಲ್ಲಿ ಗಲಾಟೆಯಾಗಿದೆ. ಜನರು ಹೋಗುತ್ತಿದ್ದ ಬಸ್ಸನ್ನು ತಡೆಗಟ್ಟಿದ್ದಾರೆ. ಪೊಲೀಸರು ಬಂದು ಒಬ್ಬನನ್ನು ಹಿಡಿದು ಚಚ್ಚಿ ಹಾಕಿ ಮೈಕೈಯಲ್ಲಿ ಹಣ್ಣುಕಾಯಿ, ನೀರುಕಾಯಿ ಮಾಡಿದ್ದಾರೆ. ಇದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ದೊಡ್ಡ ವಿಚಾರ ಅಲ್ಲವೆಂಬ ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಇವತ್ತು ಏನಾಗಿದೆ. ಎಂದರೆ.....

ಅಧ್ಯಕ್ಷರು : ನೀವು ಡಿಮ್ಯಾಂಡ್ಸ್‌ಗೆ ಹೋಗಬೇಡಿ. ಸೀಮಿತವಾದ ಪ್ರಶ್ನೆ ಸದನದ ಮುಂದೆ ಇರತಕ್ಕದ್ದು. ಶ್ರೀ ಸಿಂಧ್ಯಾರವರು.....

ಶ್ರೀ ಸಿ. ಬೈರೇಗೌಡ : ನಮಗೆಲ್ಲ ಬಂದಿವೆ. ಕವರ್‌ನಲ್ಲಿ ಹಾಕಿದ್ದಾರೆ.

ಅಧ್ಯಕ್ಷರು : ಅಚೆಂಡಾ ಪೇಪರ್‌ನಲ್ಲಿ ಇದರ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ.

ಶ್ರೀ ಪಾಟಾಳ್ ನಾಗರಾಜ್ : ಕಾಗದದ ಬೇಲದಲ್ಲಿ ಒಳಗಡೆ ಇದೆ.

ಅಧ್ಯಕ್ಷರು : ನಮಗೆ ಬರತಕ್ಕದ್ದೆಲ್ಲ ಅದರಲ್ಲಿ ಹಾಕಿ ಸದಸ್ಯರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕಳಿಸಿಕೊಡುತ್ತೇವೆ. ಇವತ್ತು ಏಪ್ರಿಲ್ ಒಂದನೇ ತಾರೀಖು ಇಲ್ಲಿ ಏನು ಬರೆದಿದ್ದಾರೆ ಎಂದರೆ– "K.S.R.T.C has no other alternative but to increase the bus fore. The proposal of the K.S.R.T.C to increase the bus fares is under consideration of the Government." ಎಂದು ಹೇಳಿ ಅಲ್ಲಿ ಒಂದು ಫುಲ್‌ಸ್ಟಾಪ್ ಇದೆ. ಎರಡು ಫುಲ್‌ಸ್ಟಾಪ್‌ಗಳ ಮಧ್ಯೆ ಎರಡು ವಾಕ್ಯಗಳಿವೆ. ಇವತ್ತು ಏಪ್ರಿಲ್ ಒಂದನೇ ತಾರೀಖು.

ಆದ್ದರಿಂದ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕಾಗಿದ್ದಿಲ್ಲ. ಮುಂದಿನ ವಿಷಯಕ್ಕೆ ಹೋಗೋಣ. ಇನ್ನು ಅರ್ಜಿಗಳನ್ನು ಒಪ್ಪಿಸುವುದು.

ಶ್ರೀ ಆರ್.ವಿ. ದೇಶಪಾಂಡೆ : ಯಾವ ಕಾರಣಕ್ಕೆ ಅವರು ಹೇಳಿದ್ದಾರೆ?

(ಗೊಂದಲ)

ಅಧ್ಯಕ್ಷರು : ಖತಕ್ಕೋಸ್ಕರ ಕಳಿಸಿಕೊಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ. ಇದು....

ಅಧ್ಯಕ್ಷರು : ಜಾರಿನೇ ಆಗಿಲ್ಲ. ನಾನು ಓದಿದ್ದು ಏನು ಅಂತೀರಿ?

"The proposal of K.S.R.T.C. to increase the bus fares is under consideration of the Government". It is under consideration.

ಶ್ರೀ ವಾಟಾಳ್ ನಾಗರಾಜ್ : ನಾವು ಹೋದ ಮೇಲೆ, ಈ ಸದನ ಮುಗಿದ ನಂತರ ಜಾರಿ ಮಾಡುತ್ತಾರೆ. ಜಾಸ್ತಿ ಮಾಡುವುದಿಲ್ಲ ಎಂದು ಸರ್ಕಾರ ಭರವಸೆ ಕೊಡಬೇಕು.

(ಗೊಂದಲ)

Sri R.V. Deshponde : Has he taken the permission and has he taken the confidence of this House. You should pull him up, Sir.

ಅಧ್ಯಕ್ಷರು : ನಾನು ಇದರ ಬಗ್ಗೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸರ್ಕ್ಯುಲರನ್ನು ಕಳಿಸಿರತಕ್ಕಂಥಾದ್ದು ಒಂದು ಭಾಗ ಆಯಿತು. ಆದರೆ ನಮಗೆ ಕನ್ಸರ್ಡ್ ಇರತಕ್ಕದ್ದು ಏನೆಂದರೆ ಬೆಲೆಗಳನ್ನು ಜಾಸ್ತಿ ಮಾಡುವುದರಿಂದ ಸಾಮಾನ್ಯ ಜನರಿಗೆ ಬಹಳ ತೊಂದರೆಯಾಗುತ್ತದೆ. ಇವತ್ತು ಎಲ್ಲ ಬೆಲೆಗಳು ಜಾಸ್ತಿಯಾಗಿರುವುದರಿಂದ ರಾಜ್ಯದಲ್ಲಿ ಸಾಮಾನ್ಯ ಜನರಿಗೆ, ಮಧ್ಯಮ ವರ್ಗದ ಜನರಿಗೆ ಬಹಳ ತೊಂದರೆಯಾಗಿದೆ. ಸರ್ಕಾರ ಕನ್ಸಿಡರೇಶನ್ ಅಂತ ಹೇಳಿ ಇವರು ಮಾಡುತ್ತಾರೆ. ಈ ಪ್ರಪೋಸಲ್‌ನ್ನು ನಾವು ಡ್ರಾಪ್ ಮಾಡಿದ್ದೇವೆ ಎಂದು ಸರ್ಕಾರ ಆಶ್ವಾಸನೆಯನ್ನು ಕೊಡಲಿ. "We will take you into confidence" ಅಂತ ಹೇಳಲಿ.

ಅಧ್ಯಕ್ಷರು : ಸರ್ಕಾರಕ್ಕೆ ನಾನು ಸೂಚನೆ ಕೊಡಬಹುದಾದರೆ ಇಂತಹ ಸಾಮಾನ್ಯ ಜನರ ಅರ್ಥ ವ್ಯವಸ್ಥೆಗೆ ಸ್ಪಂದಿಸತಕ್ಕಂಥ ಏನೇ ತೀರ್ಮಾನಗಳಾಗಲೀ, ಅದನ್ನು ಸರ್ಕ್ಯುಲರ್ ಮೂಲಕವಾಗಲೀ, ಮತ್ತೊಂದು ಸುತ್ತೋಲೆ ಮೂಲಕವಾಗಲೀ ಅಧಿವೇಶನ ನಡೆಯುತ್ತಾ ಇರತಕ್ಕ ಸಂದರ್ಭದಲ್ಲಿ ಕಳಿಸತಕ್ಕದ್ದು ಸೂಕ್ತವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಹಕ್ಕುಚ್ಯುತಿಯೂ ಆಗುತ್ತದೆ ಸ್ವಾಮಿ.

ಅಧ್ಯಕ್ಷರು : ಅವರು ತೀರ್ಮಾನ ಮಾಡಿದ್ದೇವೆ ಎಂದು ಸರ್ಕ್ಯುಲರ್ ಕಳಿಸಿದ್ದರೆ ಹಕ್ಕುಚ್ಯುತಿ ಆಗುತ್ತಿತ್ತು. ತೀರ್ಮಾನ ಆಗಿದೆಯೆಂದು ಅವರು ಸರ್ಕ್ಯುಲರ್ ಕಳಿಸಿಲ್ಲ. ಅದು ಕನ್ಸಿಡರೇಶನ್ ಸ್ಟೇಜ್‌ನಲ್ಲಿದೆ ಎಂದು ಹೇಳಿ ನಾಲ್ಕು ಪುಟ ಬರೆದು ಕಳಿಸಿದ್ದಾರೆ.

ಇಂಥಂಥ ಕಾರಣಗಳು ಇವೆ, ನಾವೆಲ್ಲರೂ ಬಹಳ ತೊಂದರೆಯಲ್ಲಿದ್ದೇವೆ, ಜನ ನಮಗೆ ಆಕರ್ಷಿಸಬೇಕು, ಲಾಸ್‌ನಲ್ಲಿ ನಡೆಯುತ್ತಿದೆ, ಆದ್ದರಿಂದ ಹೆಚ್ಚು ಮಾಡಬೇಕಾದಂಥ ಸಂದರ್ಭ ಬರಬಹುದು ಎಂದು ಇಲ್ಲಿಯೂ ಹೇಳಿದ್ದಾರೆ. ಇದನ್ನು ಅವರು ಪ್ರಬಲವಾಗಿ ಪ್ರತಿಪಾದನೆ ಮಾಡಿದ್ದಾರೆ. ಅದಕ್ಕೆ ನಾವೂ ಕೂಡ ಪ್ರಬಲವಾಗಿ ಪ್ರತಿರೋಧನ ಮಾಡಿದ್ದೀರಿ. ಈ ಸುತ್ತೋಲೆ ವಿಚಾರದಲ್ಲಿ ಅವರೇನಾದರೂ ಮಾಡಿದ್ದೇವೆಂದು ಹೇಳಿದ್ದರೆ, ಬಹಳ ಗಂಭೀರವಾಗಿ ಪರಿಗಣಿಸುತ್ತಿದ್ದೆ. ಮತ್ತು ಇದರ ಬಗ್ಗೆ ಸರ್ಕಾರಕ್ಕೂ ಎಚ್ಚರಿಕೆಯನ್ನು ಕೊಡುತ್ತಿದ್ದೆ.

ಶ್ರೀ ಆರ್.ಎಲ್. ಜಾಲಪ್ಪ : ತಾವು ಸರ್ಕಾರಕ್ಕೆ ಒಂದು ಸಲಹೆ ಕೊಡಬಹುದು. ಪ್ರವೇಶ ಶುಲ್ಕ ಮುಂತಾದುವನ್ನು ಜಾಸ್ತಿ ಮಾಡುವುದನ್ನು ನೋಡಿದರೆ, ಗಾಳಿ, ಬೆಳಕು ಇವುಗಳಿಗೆ ಟ್ಯಾಕ್ಸ್ ಹಾಕಿಲ್ಲ, ಇವುಗಳಿಗೂ ಸ್ವಲ್ಪ ಟ್ಯಾಕ್ಸ್ ಹಾಕಿ ಎಂದು ಹೇಳಿದರೆ, ನಮ್ಮ ಗತಿ ಮುಗಿದುಹೋಗುತ್ತದೆ.

ಶ್ರೀ ಕೆ.ಜೆ. ಜಾರ್ಜ್ : 1982ನೇ ಇಸವಿಯಲ್ಲಿ ಅವರ ಸರ್ಕಾರ ಇದ್ದಾಗ ಎರಡು ಸಾರಿ.....

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನಾವು ಹಾಕಿದ್ದೇವೆ, ನೀವೂ ಏಕೆ ಹಾಕುತ್ತಿದ್ದೀರಿ.....

(ಗೊಂದಲ)

ಅಧ್ಯಕ್ಷರು : ಈಗ ನೀವು ಹೇಳುತ್ತೀರಿ, ನಾವು ಹಾಕಿದ್ದೆವು ಎಂದು ಹೇಳುತ್ತಿದ್ದೀರಿ. ಇವರು ಇಲ್ಲಿ ಇನ್ನೂ ಹಾಕಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ದರ ಏರಿಸುವಲ್ಲಿ ಯಾವುದೇ ಅನುಮಾನ ಇಲ್ಲ. ಇಲ್ಲಿ ಏನು ಕಳುಹಿಸಿದ್ದಾರೆ, ಅದಕ್ಕೆ ತೀವ್ರವಾದ ಪ್ರತಿಭಟನೆ ಮಾಡಿ, ಸಭಾತ್ಯಾಗ ಮಾಡುತ್ತೇವೆ. ಇಲ್ಲದಿದ್ದರೆ ಸಾರಿಗೆ ಸಂಸ್ಥೆಯವರು ದರ ಏರಿಸುವುದಿಲ್ಲವೆಂದು ಭರವಸೆ ಕೊಡಬೇಕು, ಇದನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳಬೇಕು. ತೆರೆಮರೆಯಲ್ಲಿ; ಹಿಂದಿನ ಬಾಗಿಲಿನಲ್ಲಿ ಕಳುಹಿಸುವುದು ಸರಿಯಲ್ಲ.

ಅಧ್ಯಕ್ಷರು : ಈ ಕಾಗದ 25–3–92ರಂದು ಹೊರಟಿರತಕ್ಕಂತಾದ್ದು, ಇವತ್ತು ಏಪ್ರಿಲ್ ಒಂದನೇ ತಾರೀಖು ಆದ್ದರಿಂದ ಒಂದಕ್ಕೂಂದಕ್ಕೆ ಸಂಬಂಧವೇ ಇಲ್ಲ, ಇದು 25ನೇ ತಾರೀಖಿನ ವ್ಯವಹಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇವೆ, ಅವರು ಖಂಡಿತವಾಗಿಯೂ ಜಾಸ್ತಿ ಮಾಡುತ್ತಾರೆ, ಜಾಸ್ತಿ ಮಾಡುವುದರಲ್ಲಿ ಅನುಮಾನವೇ ಇಲ್ಲ. ಇದು ಬಡವರಿಗೆ, ಜನಸಾಮಾನ್ಯರಿಗೆ ಈ ಸರ್ಕಾರ ಮಾಡತಕ್ಕ ಭಾರಿ ಮೋಸ, ಅನ್ಯಾಯ ಎಂದು ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಅವರೇನಾದರೂ ಜಾಸ್ತಿ ಮಾಡಿದರೆ, ಅವರು ಈ ಕಡೆ ಬರುತ್ತಾರೆ, ನಾವು ಆ ಕಡೆ ಹೋಗುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು, ಈ ರಾಜ್ಯದ ಜನಸಾಮಾನ್ಯರ ಕತ್ತನ್ನು ಹಿಸುಕತಕ್ಕ ಪ್ರಯತ್ನ. ಈ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡುತ್ತೇವೆ, ರಾಜ್ಯದ ಜನರೂ ಪ್ರತಿಭಟನೆ ಮಾಡುತ್ತಾರೆ. ಈ ರೀತಿಯ ಪ್ರಯತ್ನವನ್ನು ಸರ್ಕಾರ ಮಾಡಿದರೆ, ಸರ್ಕಾರ ಚೆಂದಿಚೆಂದಿಯಾಗುತ್ತದೆ. ವಿಧಾನಸಭೆ ನಡೆಯುತ್ತಿರತಕ್ಕ ಸಂದರ್ಭದಲ್ಲಿ, ಶಾಸಕರ ಗಮನಕ್ಕೂ ಬರದೇ, ಈ ರೀತಿ ಬೆಲೆ ಏರಿಕೆ ಮಾಡುವುದು, ಬಸ್ ದರ ಏರಿಕೆ ಮಾಡತಕ್ಕಂಥ ಪ್ರಯತ್ನ ಖಂಡಿತವಾಗಿಯೂ ಜನತೆಗೆ ಮಾಡತಕ್ಕ ದ್ರೋಹ, ಇದನ್ನು ತಿದ್ದಿಕೊಳ್ಳದಿದ್ದರೆ, ಸರ್ಕಾರ ಇಡೀ ರಾಜ್ಯದಲ್ಲಿ ಚೆಂದಿ ಚೆಂದಿಯಾಗಿ ಹೋಗುತ್ತದೆ. ನಾವು ಈ ರೀತಿಯ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. (ಆ ಸುತ್ತೋಲೆಯನ್ನು ಹರಿದು ಹಾಕಿದರು).

ಅಧ್ಯಕ್ಷರು : ನನ್ನದೊಂದು ಮನವಿ. ನೀವು ಹರಿದುಹಾಕಿ ಆದರೆ ಆದನ್ನೂ ನಿಮ್ಮ ಜೊತೆಯಲ್ಲಿಯೇ ತಗೆದುಕೊಂಡು ಹೋಗಿ. ಪುನಃ ಅಲ್ಲಿಯೇ ಎಸೆಯಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋದರೆ ಚೆಂದಿಯಾದ ಸರ್ಕಾರವನ್ನು ಜೊತೆಯಲ್ಲಿ ತೆಗೆದುಕೊಂಡು ಹೋದ ಹಾಗೆ ಆಗುತ್ತದೆ. ಈ ಸರ್ಕಾರವನ್ನು ಧೂಳೀಪಟ ಮಾಡಬೇಕೆಂದು ಬಿಟ್ಟು ಹೋಗುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರೂ ಸಭಾತ್ಯಾಗ ಮಾಡಿದರು).

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲಿ ಕಸದ ಬುಟ್ಟಿ ಇದ್ದರೆ ಬಹಳ ಒಳ್ಳೆಯದಾಗುತ್ತಿತ್ತು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇಲ್ಲಿ ಕಸದ ಬುಟ್ಟಿ ಇದ್ದಿದ್ದರೆ, ಸರ್ಕಾರದ ಎಲ್ಲಾ ಅನೈತಿಕ ಕೆಲಸಗಳನ್ನು ಬುಟ್ಟಿಗೆ ಹಾಕಬಹುದಿತ್ತು.

ಅಧ್ಯಕ್ಷರು : ನಿಮ್ಮ ಕೆಲವರ ನಡವಳಿಕೆಯಿಂದ, ಈ ಸದನವನ್ನು ಕಸದ ಬುಟ್ಟಿ ಮಾಡುತ್ತಿದ್ದೀರಿ ಅಷ್ಟೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಮಂತ್ರಿಗಳು) : ತಾವು ಸೂಚನೆ ಕೊಟ್ಟಿದ್ದೀರಿ. ಸದನ ನಡೆಯುತ್ತಿರುವ ಸಂದರ್ಭದಲ್ಲಿ ಈ ತರಹ ಸುತ್ತೋಲೆ ಕಳುಹಿಸಬಾರದು, ಎಂದು ಹೇಳಿದ್ದೀರಿ, ಆ

ವಿವರವನ್ನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಗಮನಕ್ಕೆ ತರುತ್ತೇವೆ. ಮತ್ತೆ ಇನ್ನೊಂದು ವಿಚಾರ ಎಂದರೆ ರೇಟ್ ಜಾಸ್ತಿ ಮಾಡುವುದಕ್ಕೆ ಸರಕಾರ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ. ತಾವು ಹೇಳಿದಹಾಗೆ ಆದರಲ್ಲಿ ಸಹಿತ ಇದನ್ನು ಹಾಕಿದೆ. ಬಹುಶಃ ಮಾನ್ಯ ಸದಸ್ಯರ ಸಲಹೆಗಳಿಗಾಗಿ ಹಾಗೂ ಆದರ ವಿಚಾರದಲ್ಲಿ ಸನ್ಮಾನ್ಯ ಸದಸ್ಯರಿಗೆ ಅರಿವು ಮಾಡಿ ಕೊಡುವುದರ ವಿಚಾರದಲ್ಲಿ ಮಾನ್ಯ ಸಚಿವರು ಇನ್‌ಫರ್ಮೇಷನ್ ಕೊಟ್ಟಿರಬಹುದು.

ಅಧ್ಯಕ್ಷರು : ಅಲ್ಲ ಮಾನ್ಯ ಸಚಿವರೇ, ಈ ಸದನದ ಅಭಿಪ್ರಾಯಗಳು ಬೇಕಂದು ಹೇಳಿದರೆ ಮಾನ್ಯ ಗೌರವಾನ್ವಿತ ಸದಸ್ಯರುಗಳನ್ನು ಒಂದು ಮೀಟಿಂಗ್‌ಗೋ, ಚಹಾಕೂಟಕ್ಕೋ ಊಟಕ್ಕೋ ಕರೆದು ಅವರ ಸೂಚನೆಗಳನ್ನು ಸಲಹೆಗಳನ್ನು ಪರಾಂಬರಿಸಬಹುದಾಗಿತ್ತು. ಅದನ್ನು ಬಿಟ್ಟು ಸುತ್ತೋಲೆ ಕಳುಹಿಸಿ ಇಲ್ಲದ ಗೊಂದಲವನ್ನು ಸೃಷ್ಟಿ ಮಾಡತಕ್ಕಂಥ ಅವಶ್ಯಕತೆಯಾದರೂ ಏನು? ಇದೆಲ್ಲಾ ಅವಾಯ್ಡಬಿಲ್ ಕಾಂಟ್ರೋವರ್ಸೀಸ್.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಬರೀ ಅವಾಯ್ಡೆಬಲ್ ಕಾಂಟ್ರೋವರ್ಸಿ ಮಾತ್ರವಲ್ಲ, ಇದು Property of the home.

Mr. Speaker : I have already mentioned that if there were to be any mention about the decision which is being conveyed through a Circular, then I would have certainly taken the most serious objection and I would have even referred the matter to whatever Committee that goes into it. Fortunately, he has said, that it is under consideration of the Government.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇವೆ....

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಪ್ರಶ್ನೆ ಏನೆಂದು ಹೇಳಿದರೆ.....

ಅಧ್ಯಕ್ಷರು : ನಿಮ್ಮ ನಾಯಕರು ನಿಂತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧಿವೇಶನ ನಡೆಯುತ್ತಿರತಕ್ಕಂಥ ರಾಜ್ಯಕ್ಕೆ ಸಂಬಂಧಪಟ್ಟ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವಾಗ, ಮಂತ್ರಿಗಳು ಹೊರಗಡೆ ಹೇಳಿದರೆ ಅದು ಅಪಚಾರವಾಗುತ್ತದೆ ಎನ್ನತಕ್ಕಂಥಾದ್ದು ನಡೆದುಕೊಂಡು ಬಂದಿರತಕ್ಕಂಥ ಸತ್‌ಸಂಪ್ರದಾಯಗಳು, ಪರಂಪರೆಗಳ ದೃಷ್ಟಿಯಿಂದ ನಾನು ತಮಗೆ ಆ ವಿಚಾರವನ್ನು ಹೇಳಬೇಕಾಗಿಲ್ಲ. ಇವತ್ತು ಸದನ ಮುಗಿಯುತ್ತದೆಂದು ಗೊತ್ತಾದ ಮೇಲೆ, ಸರಕಾರದ ಚಿಂತನೆಯನ್ನು ಹೇಳುವುದಕ್ಕೆ ಮಂತ್ರಿಗಳು ಇರತಕ್ಕಂಥ ವೇದಿಕೆಯನ್ನು ಏತಕ್ಕೆ ಬಳಸುವುದಿಲ್ಲ. ಸದನ ಮುಗಿದ ಮೇಲೆ ಬಜೆಟ್ ಅಧಿವೇಶನ ಮುಗಿದಮೇಲೆ ಏರಿಸತಕ್ಕಂಥ ಇಳಿಸತಕ್ಕಂಥ ಕೆಲಸ ಮಾಡತಕ್ಕದ್ದು ಈ ಸದನಕ್ಕೆ ಒಂದು ರೀತಿಯ ಅಗೌರವ ತರತಕ್ಕಂಥ ಪ್ರಶ್ನೆ ಎನ್ನುವಂಥ ದೃಷ್ಟಿಯಿಂದ ಇವತ್ತು ಮಾನ್ಯ ಮಂತ್ರಿಗಳು, ಸರಕಾರದ ಆಲೋಚನೆ ಆ ವಿಚಾರದಲ್ಲಿ ಏನಿದೆ?

You may take the House into confidence and make the announcement here. It is just not the question of the Minister's thinking. I would like to know what is the thinking of the Government on this questions?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಮೊದಲನೆಯದಾಗಿ ಈ ವಿಷಯದಲ್ಲಿ.

ಅಧ್ಯಕ್ಷರು : ಬಂದ ಬಂದೆ ಸ್ವಲ್ಪ ಅದಕ್ಕೋಸ್ಕರ ನಾವು ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಾವಳಿಯನ್ನು ಜಾರಿಗೆ ತಂದಾಗ ಅದಕ್ಕೋಸ್ಕರ ಒಂದು ಪ್ರತ್ಯೇಕವಾದ 328 ರೂಲ್ಸ್‌ನ್ನು ಇಟ್ಟಿದ್ದೇವೆ, ಸಾರ್ವಜನಿಕ ಪ್ರಾಮುಖ್ಯತೆಯುಳ್ಳ, ಒಂದು ವಿಷಯದ ಮೇಲೆ ಅಧ್ಯಕ್ಷರ ಒಪ್ಪಿಗೆಯಿಂದ ಮಂತ್ರಿಗಳು ಹೇಳಿಕೆ ಕೊಡಬಹುದು, ಆದರೆ ಹೇಳಿಕೆ ಕೊಡುವಾಗ ಯಾವ ಪ್ರಶ್ನೆಯನ್ನೂ ಕೇಳತಕ್ಕದ್ದಲ್ಲ. ಈ ರೀತಿ ಒಂದು ಪ್ರಾವಿಜನ್ ಇದೆ. ಏತಕ್ಕೆ ಅದನ್ನು ಉಪಯೋಗಿಸಿಕೊಳ್ಳುವುದಿಲ್ಲ. ಇದನ್ನು ಸರ್ಕ್ಯುಲರ್ ಕಳುಹಿಸುವುದಕ್ಕೆ ಬದಲು ಈ ರೀತಿ ರೈಸ್

ಮಾಡಬಹುದಾಗಿತ್ತು, ಮಾಡಬೇಕಾಗುತ್ತದೆ, ಮಾಡುವ ಪ್ರಶ್ನೆ ಇದೆ ಎಂದು ಸದನಕ್ಕೆ ಹೇಳಬಹುದಾಗಿತ್ತಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಅಧ್ಯಕ್ಷರೆ, ನಿನ್ನೆ ಟಪ್ಪಾಲಿನಲ್ಲಿ ಬಂದಿದೆ, ನೋಟಿಫಿಕೇಷನ್ ಬಂದಿದೆ, ಇವತ್ತು ಕಾಗದ ಕಳುಹಿಸಿದ್ದಾರೆ, ತಮ್ಮ ಆಫೀಸಿನಿಂದ ಬರುತ್ತದಲ್ಲ ಅದರಲ್ಲಿ ಇಲಾಖೆಯವರು ಕಳುಹಿಸಿದ್ದಾರೆ. ನನಗೂ ಬೆಳಗ್ಗೆ ಅದನ್ನು ನೋಡಿದ ತಕ್ಷಣ ಮನಸ್ಸಿಗೆ ಸ್ವಲ್ಪ ಬೇಸರವಾಯಿತು, ಇದು ದೊಡ್ಡ ಪ್ರಶ್ನೆ, ಈ ವಿಷಯದ ತೀರ್ಮಾನದ ಬಗ್ಗೆ ಕೂಡಾ ಈ ಸದನದ ಸದಸ್ಯರುಗಳು ಮನಸ್ಸನ್ನು ಹರಿಸಬೇಕಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಇವತ್ತು ಸಭೆ ಇರುತ್ತದೆ ಎಂದು ಗೊತ್ತಿತ್ತು, ಆದರೆ ಮಾನ್ಯ ಜಾರ್ಜ್‌ರವರಿಗೆ ಬಹಳ ಮಟ್ಟಿಗೆ ಈ ವಿಷಯದ ಬಗ್ಗೆ ಅಷ್ಟು ಮಾಹಿತಿ ಗೊತ್ತಿತ್ತೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ. ಇದರ ಚೇರ್ಮನ್ ಸಹ ಈ ಸದನದ ಸದಸ್ಯರಿದ್ದಾರೆ. ಮಂತ್ರಿಗಳೂ ಕೂಡಾ ಇದ್ದಾರೆ. ಹೀಗಿರುವಾಗ ಈ ದಿವಸದಲ್ಲಿ ಇದರ ಅವಶ್ಯಕತೆ ಇದೆಯೇ ಹೇಗೆ ಎಂಬುದನ್ನು ಸ್ಪಷ್ಟ ಮಾಡತಕ್ಕದ್ದು ಒಳ್ಳೆಯದು. ನಮ್ಮ ಅಭಿಪ್ರಾಯ ಇದು ಮಾಡಬಾರದೆಂದು ಬಹಳ ಜನ ಇದ್ದೇವೆ. ನಾವು ನಮ್ಮ ಅಭಿಪ್ರಾಯ ಕೂಡಾ ಹಾಗೇ ಇದೆ, ಈಗಾಗಲೇ ಬಹಳ ಭಾರ ಜಾಸ್ತಿಯಾಗಿದೆ, ಡೀಸೆಲ್ ವಗೈರೆ ಬೆಲೆ ಜಾಸ್ತಿಯಾಗಿಲ್ಲ, ಹೀಗಿರುವಾಗ ಇದನ್ನು ಮಾಡಬಾರದೆಂದು ಅಭಿಪ್ರಾಯಉಳ್ಳವರಾಗಿದ್ದೇವೆ, ನಾವು ಆದುದರಿಂದ ಮಾನ್ಯ ಮಂತ್ರಿಗಳನ್ನು ತಾವು ಕರೆಸಿದರೆ, ಮಂತ್ರಿಗಳು ಅಥವಾ ಚೇರ್ಮನ್‌ರವರು ಏನು ಈ ಸದನದ ಸದಸ್ಯರಿದ್ದಾರೆ ಅವರೇ ಹೇಳಿಕೆ ಕೊಡುವುದು ಸೂಕ್ತ. ತಾವು ಹಾಗೆ ಒಂದು ನಿರ್ದೇಶನ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಬಹಳ ಮಹತ್ವದ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಮತ್ತು ಪ್ರೊಸೀಜಯರ್ ರ‍್ಯಾಂಕ್ ತಪ್ಪು ಏನಾಗಿದೆ ಅದನ್ನು ಸಹ ತಾವು ಎತ್ತಿ ಹಿಡಿದ್ದೀರಿ ಅದಕ್ಕೆ ನಾನು ನಿಮಗೆ ಚಿರರುಣಿಯಾಗಿದ್ದೇನೆ. ಈಗ ನನಗೆ ಈ ಸರ್ಕಾರದಿಂದ ಬೇಕಾಗಿರತಕ್ಕಂಥಾದ್ದು ಕೊನೆ ಪಕ್ಷ ಒಂದು ಭರವಸೆ ಕೊಟ್ಟರೆ ಸಾಕು. ಇವತ್ತು ನೀವು ಏನೋ ಹೌಸ್ ಅರ್ಜ್ಡನ್ ಮಾಡಿ ಹೋಗುತ್ತೀರಿ. ಮೇನಲ್ಲಿ ಮತ್ತೆ ಸೇರುತ್ತೇನೆ ಎಂದು ನನಗೆ ತಿಳಿದು ಬಂದಿದೆ. ದಯವಿಟ್ಟು ಅಲ್ಲಿಯವರೆಗೂ ಬಸ್ಸಿನ ದರವನ್ನು ಜಾಸ್ತಿ ಮಾಡುವುದಿಲ್ಲ ಎನ್ನತಕ್ಕಂಥದ್ದನ್ನು ಹೇಳಿ, ನಾವು ನಿಮ್ಮನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ನಾವು ಮಾಡುತ್ತೇವೆ ನಿಮ್ಮ ಜೊತೆಯಲ್ಲಿ ನಾವು ಚರ್ಚೆ ಮಾಡುತ್ತೇವೆ ಎನ್ನತಕ್ಕಂಥ ಅಶ್ಯೂರೆನ್ಸ್ ಸರ್ಕಾರದಿಂದ ಕೊನೆಯ ಪಕ್ಷ ಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಿಮಗೆ ಹೇಳುವುದಕ್ಕೆ ಕಷ್ಟವಾದರೆ ಸಾರಿಗೆ ಮಂತ್ರಿಗಳನ್ನು ಕರೆಸಿ. ಅವರು ಉತ್ತರ ಕೊಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದಕ್ಕೆ ಅಂತಹ ಕಷ್ಟ ಏನೂ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೇ ಈ ವಿಚಾರ ಕ್ಯಾಬಿನೇಟ್‌ನಲ್ಲಿ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ ಅದು ಬರೀ ಕೆ.ಎಸ್.ಆರ್.ಟಿ.ಸಿ.ಗೆ ಸಂಬಂಧಪಟ್ಟಿದ್ದು ಅಷ್ಟೇ ಅಲ್ಲ ಈ ಬಸ್ ರೇಟ್ಸ್ ರಿವೈಜ್ ಮಾಡುವುದು, ತಮಗೆ ಗೊತ್ತಿದೆ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರವಾಗಿ ಇಡೀ ರಾಜ್ಯದಲ್ಲಿರುವ 19 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ನೋಟಿಫಿಕೇಶನ್ ಮಾಡಬೇಕು. ಅದನ್ನು ಕ್ಯಾಬಿನೇಟ್‌ನಲ್ಲಿ ಅಪ್ರೂವ್ ಮಾಡಬೇಕಾಗುತ್ತದೆ. ಇವತ್ತು ಪಬ್ಲಿಕ್ ಒಪಿನಿಯನ್ ತೆಗೆದುಕೊಳ್ಳಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ.ಯವರು ಬಂದು ಹೇಳುತ್ತಾರೆ. ನೋಡಿ ನಮಗೆ ಇಂತಹ ಕಷ್ಟ ಇದೆ ಅಂತ. ಪ್ರೈವೇಟ್ ಆಪರೇಟರ್ಸ್ ಮತ್ತು ಇಂಟ್ರೆಸ್ಟರ್ ಪಬ್ಲಿಕ್ ನಮ್ಮಂತಹ ರೆಪ್ರಜಂಟೆಟೀವ್ಸ್ ಹೋಗಿ ಹೇಳುತ್ತೇವೆ. ಇದನ್ನೆಲ್ಲಾ ಸಹ ಮಾಡದೆ ಸುಮ್ಮ ಸುಮ್ಮನೆ ನಾವು ಮಾಡುತ್ತೇವೆ ನೀವು ಎಲ್ಲಾ ಸಹಕಾರ ಕೊಡಿ ಅಂತ ಹೇಳಿದರೆ ಅರ್ಥ ಏನು? ಯಾರಿಗೆ ಸಹಾಯ ಮಾಡಲಿಕ್ಕೆ ನೀವು ಹೊರಟಿದ್ದೀರಿ ಎಂದು ನಾನು ಕೇಳುತ್ತೇನೆ. ಅದಕ್ಕೆ ನಿಮ್ಮಿಂದ ಕೊನೆಯ ಪಕ್ಷ ಕೇಳುವುದು ನಮ್ಮೆಲ್ಲರನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ನಿಮ್ಮ ಜೊತೆ ಚರ್ಚೆ ಮಾಡಿ ಮಾಡುತ್ತೇವ ಅಲ್ಲಿಯವರೆಗೂ ಮಾಡುವುದಿಲ್ಲ ಎನ್ನತಕ್ಕಂಥ ಒಂದು ಭರವಸೆಯನ್ನಾದರೂ ಕೊಡಿ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ ಈಗ ಸನ್ಮಾನ್ಯ ಅಧ್ಯಕ್ಷರೇ ಈಗ ಸನ್ಮಾನ್ಯ ಸದಸ್ಯರಾದಂತಹ ಈ ಸದನದ ವಿರೋಧ ಪಕ್ಷದ ಉಪನಾಯಕರಾದಂತಹ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಏನು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ, ಈ ಒಂದು ಕೆ.ಎಸ್.ಆರ್.ಟಿ.ಸಿ. ಪ್ರೊಪೋಸಲ್ಸ್ ಬಗ್ಗೆ, ಆಕ್ಟ್ ಮಾಡತಕ್ಕಂಥದ್ದರ ಬಗ್ಗೆ ಅವರು ಬಹಳ ಒಳ್ಳೆಯ ಒಂದು ಸೂಚನೆ ಕೊಟ್ಟಿದ್ದಾರೆ. ಏಕೆಂದರೆ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಮತ್ತು ಅದರ ಸೇವೆಯ ನಾನು ಮುಖಗಳಲ್ಲಿ ಹೆಚ್ಚು ದಕ್ಷತೆಯನ್ನು ಹೆಚ್ಚಿಸುವಲ್ಲಿ ಏಕೆಂದರೆ ಫೇರ್ಸ್ ಕೂಡ ಅದರ ಒಂದು ಅಂಗ. ಅದಕ್ಕೆ ಸಂಪನ್ಮೂಲಗಳು ಇಲ್ಲದಿದ್ದರೆ ಯಾವುದು ದಕ್ಷತೆ ಆಗಲಿ ಮತ್ತೊಂದು ಆಗಲಿ ಅಥವಾ ಫೇರ್ಸ್ ಹೆಚ್ಚು ಮಾಡದೆ ಸಂಪನ್ಮೂಲಗಳನ್ನು ಕ್ರೋಢೀಕರಿಸದೆ ಸಾಧ್ಯವಾಗುವುದಿದ್ದರೆ ಆ ದಿಸೆಯಲ್ಲಿ ಸೂಚನೆಗಳು ಬರುವುದಾದರೆ ಅದು ತಮ್ಮಿಂದ ಅನುಭವ ಪಡೆದುಕೊಳ್ಳುವಂತಹದ್ದಕ್ಕೆ ಅನೇಕ ಜನ ಮಾಜಿ ಸಚಿವರು ತಾವಿದ್ದೀರಿ, ಅದನ್ನು ಸ್ವಾಗತಿಸುತ್ತೇವೆ. ತಾವು ಏನು ಸೂಚನೆ ಕೊಡುತ್ತೀರಿ ಅದಕ್ಕೆ ಸಂಬಂಧಪಟ್ಟ ಹಾಗೆ ಇದರಲ್ಲಿ ಪರಿಣತಿ ಹೊಂದಿರುವ ಮಾನ್ಯ ಸಚಿವರು ಇದ್ದಾರೆ, ಶಾಸಕರು ಇದ್ದಾರೆ ವಿರೋಧ ಪಕ್ಷದ ನಾಯಕರು ನಾನಾ ಪಕ್ಷದವರು ಮತ್ತು ನಮ್ಮ ಪ್ರಮುಖ ವಿರೋಧ ಪಕ್ಷದ ನಾಯಕರು ತಮ್ಮ ಜೊತೆಯಲ್ಲಿ ಮಾತುಕತೆ ಮಾಡುತ್ತೇವೆ ಮುಂದೆ ಮಾತುಕತೆ ಮಾಡಿ, ಯಾವ ಹೆಜ್ಜೆ ಇಡಬೇಕು ಅದನ್ನು ಇಡುತ್ತೇವೆ...

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ಇದು ಖಾಸಗಿ ಮಾತುಕತೆ ಮಾಡತಕ್ಕಂಥ ಪ್ರಶ್ನೆ ಅಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ಅದು ಖಾಸಗಿ ಮಾತುಕತೆ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು. ಖಾಸಗಿ ಮಾತುಕತೆಯೇ?

ಅಧ್ಯಕ್ಷರು : ಇವತ್ತು ಸದನ ಮುಗಿಯುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ಮುಗಿಯುತ್ತದೆ. ಅದರ ಮೇಲೆ ಖಾಸಗಿಯೇ.....

ಅಧ್ಯಕ್ಷರು : ಆಮೇಲೆ ನಿಮ್ಮನ್ನು ಕರೆದರೆ ಅದು ಹೇಗೆ ಖಾಸಗಿ ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು ಸದನ ಮುಗಿದ ಮೇಲೆ ಕರೆದರೆ ಅದು ಖಾಸಗಿಯೇ?

ಅಧ್ಯಕ್ಷರು : ಅದಕ್ಕೇನು ಯಾವಾಗ ಬೇಕಾದರೂ ಕರೆಯಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಸದನ ನಡೆಯುತ್ತಿರತಕ್ಕಂಥ ಕಾಲದಲ್ಲಿ ಇದು ಸಾರ್ವತ್ರಿಕವಾಗಿ ಇಡೀ ರಾಜ್ಯದ ಮೇಲೆ ಪರಿಣಾಮ ಬೀರುವಂಥಾದ್ದು ಅದನ್ನು ಸದನದಲ್ಲಿರತಕ್ಕಂಥ ಸದಸ್ಯರಿಗೆ ಸರ್ಕಾರದ ಚಿಂತನೆ ಏನು ಅಂತ ಹೇಳುವುದು ಬೇಡವೇ? ಸದನ ಮುಗಿದ ಮೇಲೆ ಕರೆದರೆ ಅದು ಖಾಸಗಿ ಚರ್ಚೆ ಅಲ್ಲವೇ? We may choose to go or we may not choose to go. But when the House is in session....

Mr. Speaker : No Unfortunately, I have to revert back to what happened earlier. ಆ ದಿನ ಡಿಮ್ಯಾಂಡ್ ಇತ್ತು. ಬೇಡಿಕೆ ಇತ್ತು. ಆ ಬೇಡಿಕೆ ಬಗ್ಗೆ ಚರ್ಚೆ ನಡೆಯಿತು.

Sri D.B. Chandre Gowda : He could have made a statement on that day.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬಸ್ ಫೇರ್ಸ್ ಜಾಸ್ತಿ ಮಾಡುವ ಬಗ್ಗೆ ಆಫರು ಆ ದಿನ ಟೇಬ್ ಮಾಡಲಿಕ್ಕೆ ಹೊಗಿಲ್ಲ.

Sri D.B. Chandre Gowda : We agree.

ನಾವು ಚರ್ಚೆ ಮಾಡಿಲ್ಲ. ಆದರೆ ಹೇಳಬೇಕಾಗಿತ್ತು. ಹೌಸ್ ಮುಗಿದ ಮೇಲೆ.....

ಅಧ್ಯಕ್ಷರು : ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳುತ್ತಾರೆ?

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ ಈಗಾಗಲೇ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಸೂಚನೆ ಕೊಟ್ಟರು ಮಾತುಗತೆ ಮಾಡಬೇಕು ಅಂತ. ಮಾತುಕತೆಯನ್ನು ನಾವು ಅಫಿಷಿಯಲ್ ಆಗಿ ಮಾಡುತ್ತೇವೆ. ಅನಧಿಕೃತವಾಗಿ ಮಾಡುವುದಿಲ್ಲ. ಸದನ ಇವತ್ತು ಮುಗಿಯುತ್ತದೆ. ಇನ್‌ಕ್ರೀಜ್ ಮಾಡುವ ಬಗ್ಗೆ ನಾವು ತಮ್ಮ ಜೊತೆಯಲ್ಲಿ ಮಾತುಕತೆ ಮಾಡಿ ಮುಂದೆ ಯಾವ ಕ್ರಮ

ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಆಲ್ಲಿಯವರೆಗೂ ರಿವೈಜ್ ಮಾಡಕ್ಕಂಥ ಪ್ರಶ್ನೆ ಬರುವುದಿಲ್ಲ.

We will agree with you, we will discuss with you and then only we will take decision.

Mr. Speaker : The House will take note of that.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಾನು ತಮ್ಮ ಗಮನಕ್ಕೆ ತರತಕ್ಕಂಥಾದ್ದು.....

ಅಧ್ಯಕ್ಷರು : ಸಾಧ್ಯವಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ನಾನು ತಮ್ಮ ಗಮನಕ್ಕೆ ತರುವುದು ನಾವು ಇಲ್ಲಿ ಇರಲಿಲ್ಲ. ಇವತ್ತು ಕೊನೆಯ ದಿವಸ.....

ಅಧ್ಯಕ್ಷರು : ತಾವು ಇಲ್ಲಿ ಇಲ್ಲದೆ ಹೋದರೂ ಕೊನೆ ದಿವಸದಲ್ಲಿ ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದೀರಿ ಈಗ ಅರ್ಜಿಗಳ ಮಂಡನೆ.....

ಅಧ್ಯಕ್ಷರು : ಅಧ್ಯಕ್ಷ ಸ್ಥಾನದಿಂದ ಎದ್ದ ಮೇಲೆ ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ : ಆರೋಗ್ಯ ಇಲಾಖೆಯಲ್ಲಿ ಔಷಧಿಗಳನ್ನು ಕೊಂಡುಕೊಳ್ಳಲು ಟೆಂಡರ್ ಕರೆದಿರುವ ಬಗ್ಗೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಅಧ್ಯಕ್ಷರೇ, ಈ ಆರೋಗ್ಯ ಇಲಾಖೆಯಲ್ಲಿ ಔಷಧಿಗಳನ್ನು ಕೊಂಡುಕೊಳ್ಳುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ಪತ್ರಿಕೆಗಳಲ್ಲಿ ಟೆಂಡರ್‌ಗಳನ್ನೂ ಕೂಡಾ ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥಾದ್ದಲ್ಲಿ ಏನಾಗಿದೆ? ಒಂದೇ ಟೆಂಡರ್ ಒಂದೊಂದು ಪತ್ರಿಕೆಯಲ್ಲಿ ಒಂದೊಂದು ತರಹ ಬಂದಿದೆ. ಇಂಡಿಯನ್ ಎಕ್ಸ್‌ಪ್ರೆಸ್ 6–9–1991ರಲ್ಲಿ ಟೆಂಡರ್ ಕರೆದಿದ್ದಾರೆ. ಅದರ ಪ್ರಕಾರ ಟೆಂಡರ್ ನಂಬರ್ 09589091, ಡೇಟೆಡ್ 26–8–91, Tenders for supply of Drugs, Chemicals and Hospital necessities : Tenders are invited from the reputed manufacturers... ವೈಸ್ ಟೇರ್ಮನ್ : ಬೈರೇಗೌಡರೇ ಇದು ಜೀರೋ ಅವರ್‌ನಲ್ಲಿ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಸಿ. ಬೈರೇಗೌಡರು : ನಾನು ಸೂಕ್ಷ್ಮವಾಗಿ ಹೇಳಿ ಮುಗಿಸಿಬಿಡ್ತೇನೆ. ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ವೈಸ್ ಟೇರ್ಮನ್ : ಯಾವ ಪಾಯಿಂಟ್ ಮೇಲೆ?

ಶ್ರೀ ಬಸವರಾಜರಾಯರೆಡ್ಡಿ : ಯಾವ ಪಾಯಿಂಟ್ ಎಂದು ಹೇಳುತ್ತೇನೆ.

ವೈಸ್ ಟೇರ್ಮನ್ : ಬೈರೇಗೌಡರೆ, ಜೀರೋ ಅವರ್‌ನಲ್ಲಿ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಸಿ. ಬೈರೇಗೌಡ : ಇದು ಹಳ ಪ್ರಾಮುಖ್ಯವಾದ ವಿಚಾರ ಇದೆ. ನಾನು ಇದರ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನೂ ಕಳುಹಿಸಿದೆ. ನಾನು ನೇರವಾಗಿ ಎದ್ದು ಮಾತನಾಡುತ್ತಿಲ್ಲ. ಅದು ಇವತ್ತಿನ ದಿವಸ ಬರಬೇಕಾಗಿತ್ತು. ಬರದೇ ಇದ್ದ ಕಾರಣದಿಂದ ಬೇರೆ ರೂಪದಲ್ಲಿ ಚರ್ಚೆ ಮಾಡಬೇಕಾಯಿತು.

ವೈಸ್ ಟೇರ್ಮನ್ : ದಯಮಾಡಿ ಕುಳಿತುಕೊಳ್ಳಿ : ಆಮೇಲೆ ಬೇಕಾದರೆ ಚರ್ಚೆಗೆ ವಿಚಾರ ಮಾಡೋಣವಂತೆ. ಈಗ ಅರ್ಜಿಗಳನ್ನು ಒಪ್ಪಿಸುವುದು.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ,

ವೈಸ್ ಟೇರ್ಮನ್ : ದಯಮಾಡಿ ಅಜೆಂಡಾ ಪ್ರಕಾರ ಹೋಗಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಸಿ. ಬೈರೇಗೌಡ : ಆಮೇಲೆ ಅವಕಾಶ ಕೊಡ್ತೀರಿ ತಾನೇ ಪ್ರಸ್ತಾಪ ಮಾಡುವುದಕ್ಕೆ?

ವೈಸ್ ಟೇರ್ಮನ್ : ವಿಚಾರ ಮಾಡುತ್ತೇನೆ.